**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿನಾಂಕಃ 13-02-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಎನ್ ಎಮ್ ಎಮ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ 4 ನೇ ಪ್ಯಾರಾದಲ್ಲಿ ನಾನು ಬಸ್ಸು ಹತ್ತುತ್ತಿರುವಾಗ ಬಸ್ಸಿನ ಚಾಲಕ ನಾನು ಹತ್ತುವುದನ್ನು ಸರಿಯಾಗಿ ನೋಡದೇ ಮುಂದೆ ಚಲಾಯಿಸಿ ಅಪಘಾತಪಡಿಸಿದ್ದು ಅಂತಾ ನೀವು ಹೇಳಿದ್ದು ಆದರೆ ನೀವು ಬಸ್ಸನ್ನು ಹತ್ತಿ ನಿನ್ನ ಗಂಡ ಮತ್ತು ಚಿಕ್ಕಮ್ಮ ಹತ್ತಿದ್ದಾರೋ ಇಲ್ಲವೋ ಎಂಬುದನ್ನು ನೋಡಲು ಹೋಗಿ ಅವರು ಹತ್ತಿಲ್ಲ ಎಂದು ತಿಳಿದುಕೊಂಡು ಗಡಿಬಿಡಿಯಿಂದ ಬಸ್ಸಿನಿಂದ ಕೆಳಗೆ ಇಳಿಯುವಾಗ ನಾನೇ ಬಿದ್ದು ಅಪಘಾತಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಬಸ್ಸು ಚಾಲಕನು ಬಸ್ಸನ್ನು ಮುಂದೆ ಚಲಾಯಿಸಲು ಕಂಡೆಕ್ಟರ್ ಸಿಟಿ ಊದಿದ ನಂತರ ಚಲಾಯಿಸುತ್ತಾನೆ ಎಂದರೆ ಸರಿ. ಬಸ್ಸು ಕಂಡೆಕ್ಟರನು ಎಲ್ಲಾ ಪ್ರಯಾಣಿಕರು ಬಸ್ಸನ್ನು ಹತ್ತಿದ ನಂತರ ಸಿಟಿ ಊದುತ್ತಾನೆ ಎಂದರೆ ಸರಿ. ಪ್ರತಿ ದಾಖಲೆಗಳಲ್ಲಿ ನಾನೇ ಬಿದ್ದು ಗಾಯ ಮಾಡಿಕೊಂಡಿದ್ದೇನೆಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಕಾಲಿನ ಪಾದಕ್ಕೆ ಆದ ನೋವಿನಿಂದಾಗಿ ನನಗೆ ಶಾಶ್ವತ ಅಂಗನ್ಯೂನತೆ ಉಂಟಾಗಿದೆ ಎಂದರೆ ಸರಿಯಲ್ಲ. ನನಗೆ ಹೆಚ್ಚಿನ ಅಂಗನ್ಯೂನತೆ ಉಂಟಾಗದಿದ್ದರೂ ಸಹ ವೈದ್ಯರ ಬಳಿ ಹೆಚ್ಚಿನ ಪ್ರಮಾಣದ ಅಂಗನ್ಯೂನತೆ ಪ್ರಮಾಣ ಪತ್ರವನ್ನು ಬರೆಸಿಕೊಂಡು ಬಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. 2 ಲಕ್ಷ ರೂಗಳನ್ನು ಖರ್ಚು ಮಾಡಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷತನದಿಂದ ಅಪಘಾತವಾಗಿದ್ದರಿಂದ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. -

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.